

'ಏನಪ್ಪಾಜಿ, ಇತ್ತೀಚೆಗೆ ಫೇಸ್‌ಬುಕ್ಕಲಿ ನಿನ್ನ ಲೇಖನಗಳೇ ಮಿಂಚ್ತಾ ಇರ್ತವೆ... ಪ್ರತಿದಿನ ಬರ್ದು ಬರ್ದು ಹಸಿಹಸಿ ಹಂಗೇ ಹಾಕದಲ್ಲ. ವಿರಾಮವಾಗಿ ಬರ್ದು ತಿದ್ದಿ, ತೀಡಿ ಹಾಕ್ಬೇಕು. ಕನ್ನಡ ಎಂ.ಎ ಓದಿ ಪ್ರಿನ್ಸಿಪಾಲ್ ಆದವನ ಲೇಖನ ಅಂದ್ರೆ ಎಷ್ಟು ಸ್ಟಾಂಡರ್ಡ್ ಆಗಿರ್ಬೇಕು? ನಾನ್ ಅವಂತ್ತಿದ್ಲೇ ನಿಂಗೆ ಹೇಳನಾಂತ ಇದ್ದೆ... ನೀನ್ ವಿರಾಮಾಗಿ ಸಿಕ್ಕಿರ್ಲಿಲ್ಲ' ಎಂದಳು ದಾಕ್ಷಾಯಿಣಿ.

ಹುಚ್ಚೇಗೌಡ ಮೊಬೈಲ್ ತೆಗೆದು ಮಗಳ ಮುಂದೆ ಹಿಡಿಯುತ್ತಾ 'ಅದ್ಯಾಕೆ ಹಂಗೆ ಹೇಳ್ತಿಯಾ ದಾಕ್ಷಾಯಿಣಿ. ಇಲ್ಲಿ ನೋಡು, ನನ್ನ ಲೇಖನಕ್ಕೆ ಎಂಥಾ ಒಳ್ಳೊಳ್ಳೆ ಕಾಮೆಂಟ್ ಬಂದಿದಾವೆ' ಎಂದ.

'ಅದೆಲ್ಲಾ ಒಂದ್ ತರ ಭ್ರಮೆ ಬಿಡು ಅಪ್ಪಾಜಿ. ನೀನ್ ಗುಡ್ ಅಂತ ಹಾಕಿದ್ದರೆ ಅವರೂ ಗುಡ್ ಅಂತಾ ಹಾಕ್ತಾರೆ. ನೀನ್ ವೆರಿ ಗುಡ್ ಅಂತಾ ಹಾಕಿದ್ದರೆ ಅವ್ರೂ ವೆರಿ ಗುಡ್ ಅಂತ ಹಾಕ್ತಾರೆ ಅಷ್ಟೆ. ನೀನ್ ಅವರ ಲೇಖನ ಹೊಗಳಿದ್ರೆ ಅವರೂ ನಿನ್ನ ಲೇಖನ ಹೊಗಳ್ತಾರೆ... ಇದೊಂಥರ ಮದುವೇಲಿ ಮುಯ್ಯಿ ಹಾಕಿದಂಗೆ. ನೀನ್ ಅವರ ಮದುವೇಲಿ ಐವತ್ತು ರೂಪಾಯಿ ಹಾಕಿದ್ರೆ. ಅವರೂ ನಿಮ್ಮನೆ ಮದುವೇಲಿ ಐವತ್ತೇ ಹಾಕ್ತಾರೆ ನೀನ್ ಐನೂರ್ ಹಾಕಿದ್ರೆ ಅವ್ರೂ ಐನೂರ್ ಹಾಕ್ತಾರೆ... ಅದರ ಬದ್ಲು ಸೀರಿಯಸ್ ಬರವಣಿಗೆ ಮಾಡಿ ಯಾವುದಾದರೂ ಪತ್ರಿಕೆಗೆ ಕಳಿಸಿಕೊಡು. ಸಂಪಾದಕರಾದ್ರೂ ಎಡಿಟ್ ಮಾಡಿ ತಿದ್ದಿ, ತೀಡಿ ಚಂದ ಮಾಡಿ ಪ್ರಕಟಿಸ್ತಾರೆ' ಎಂದು ಅಪ್ಪನಿಗೆ ಬುದ್ಧಿಮಾತು ಹೇಳಿದ್ದಳು.

ಮತ್ತೆ ಎಂಟು-ಹತ್ತು ದಿನ ಹುಚ್ಚೇಗೌಡ ಯಾರ ಜೊತೆಯೂ ಬೆರೆಯಲಿಲ್ಲ. ಬರವಣಿಗೆಗೂ ಕೈಹಾಕಲಿಲ್ಲ. ಅಂದು ಭಾನುವಾರ. ಕೈಯಲ್ಲಿ 'ಮಲೆಯಾದ್ರಿಯ ಕೂಗು' ಪತ್ರಿಕೆ ಹಿಡಿದು ವರದರಾಜ ಹುಡುಕಿಕೊಂಡು ಬಂದ. ಕೆದರಿದ ತಲೆ ನರೆತ ಗಡ್ಡ ನೋಡಿ 'ಇದೇನು ಹಿಂಗಾಗಿ ಬಿಟ್ಟರಿ. ಹುಷಾರಿಲ್ವ? ಇಲ್ನೋಡಿ ಈವತ್ತಿನ ಪೇಪರು' ಎನ್ನುತ್ತಾ ಪೇಪರ್ ಬಿಡಿಸಿ ಅವನ ಮುಂದೆ ಹಿಡಿದ. ಅದರಲ್ಲಿ ಅವನ ಲೇಖನ ಅದರೊಂದಿಗೇ ತನ್ನ ಹೊಸ ಹೆಸರು 'ಹೊಸ್ಮನೆ ಮದನ್ ಕುಮಾರ್' ದಪ್ಪಕ್ಷರಗಳಲ್ಲಿ ಅಚ್ಚಾಗಿದೆ. ಅವನ ಬಾಡಿದಂತಿದ್ದ ಮುಖ ಒಮ್ಮೆಲೇ ಅರಳಿತು.

'ನಾನು ಗಡ್ಡ ಬಿಟ್ಟಿದ್ದಕ್ಕೂ ಸಾರ್ಥಕವಾಯ್ತು ಬಿಡಿ. ಈವತ್ತು ನಾನು ಸಾಹಿತಿ ಆದೆ' ಎಂದ.

'ಇರ್ಲಿ ಬಿಡಿ, ಬನ್ನಿ ಈ ಅವತಾರದಲ್ಲಿ ಒಳ್ಳೆ ಕಾಯಿಲೆಯವರಂಗೆ ಕಾಣ್ತಿದೀರಿ. ಇದೆಲ್ಲನೂ ನೀಟಾಗಿ ಬೋಳಿಸಿ ಹೇರ್ ಡೈ ಮಾಡಿಸಿಕೊಡ್ತೀನಿ. ನೀವು ಸಾಹಿತಿ ಅಂತಾ ಪ್ರಸಿದ್ಧಿ ಆದ ಮೇಲೆ ಗಡ್ಡ ಬಿಡುವಿರಂತೆ' ಎನ್ನುತ್ತಾ 'ನಕ್ಷತ್ರ'ದ ಬಳಿ ಇರುವ ಸೆಲೂನಿಗೆ ಕರೆದುಕೊಂಡು ಹೋಗಿದ್ದ.

* * *

ನೋಡಿದವರೆಲ್ಲಾ ಮೆಚ್ಚುಗೆ ನೋಟ ಹರಿಸುತ್ತಿದ್ದ ತನ್ನ ಹೊಸ ವಿನ್ಯಾಸದ ಶರ್ಟು, ಪ್ಯಾಂಟಿಗೆ ತಾನೇ ಹೆಮ್ಮೆಪಡುತ್ತಾ ಹೊಸ್ಮನೆ ಮದನ್ ಕುಮಾರ್ ಅಲಿಯಾಸ್ ಹುಚ್ಚೇಗೌಡ ಶೀವಿಯಿಂದ ತನ್ನ ಮನೆಯ ಕಡೆ ಹೆಜ್ಜೆ ಹಾಕುತ್ತಿದ್ದ. ತನ್ನ ಮನೆಯಲ್ಲಿ ಹೆಂಡತಿ, ಪುಟ್ಟಮ್ಮಜ್ಜಿ, ದಾಕ್ಷಾಯಿಣಿ ಅದರಲ್ಲೂ ಮೊಮ್ಮಗ ಸಾತ್ವಿಕ್ ಹೇಗೆ ಮೆಚ್ಚಿಕೊಳ್ಳುತ್ತಾರೆ ನೋಡೋಣ ಎಂದು ಯೋಚಿಸುತ್ತಲೇ ಮನೆ ಸಮೀಪಿಸಿದ.

ಎಂದಿನಂತೆ ಪುಟ್ಟಮ್ಮಜ್ಜಿ ಮನೆಯ ಮುಂದೆ ಕುಳಿತ್ತಿತ್ತು. ಕ್ಲಾಸಿನಿಂದ ಬಂದಿದ್ದ ಸಾತ್ವಿಕ್ ಅದರ ಮಂದೆ ಕುಳಿತು ಕೈಯೊಡ್ಡಿದ್ದ. ಅಜ್ಜಿ ರವಿಕೆಯ ಕೋರೆ ಜೋಬಿನಿಂದ ಬೆಲ್ಲ, ಕಾಯಿ ಹೊರಗೆಳೆಯುತ್ತಿತ್ತು.

ಹುಚ್ಚೇಗೌಡ ಮನೆ ಸಮೀಪಿಸಿ ಅವರ ಮುಂದೆ ನಿಂತ. ಅಜ್ಜಿ ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡಿತು. ಸಾತ್ವಿಕನೂ ಬೆಲ್ಲ- ಕಾಯಿ ಅರೆಯುತ್ತಿದ್ದ ಬಾಯನ್ನು ಹಾಗೆಯೇ ನಿಲ್ಲಿಸಿ ನೋಡತೊಡಗಿದ. ಹೆಂಡತಿ ಮುಂದಿನ ಬಾಗಿಲಿಗೆ ಒರಗಿ ನಿಂತುಕೊಂಡಿದ್ದಳು. ಆಟೋದಿಂದ ಇಳಿದು ಬಂದ ದಾಕ್ಷಾಯಿಣಿಯೂ ಅವರ ಬಳಿ ಬಂದಳು. ಯಾರೂ ಬಾಯಿ ಬಿಡದೇ ಸುಮ್ಮನೆ ನಿಂತಿದ್ದು ಕಂಡ ಹುಚ್ಚೇಗೌಡ ಮೊಮ್ಮಗನನ್ನು ಕುರಿತು 'ಹ್ಯಾಗಿದೆ ಡ್ರೆಸ್ಸು?' ಎಂದ ಹೆಮ್ಮೆಯಿಂದ.

ಮೊಮ್ಮಗ ಪುಟ್ಟಮ್ಮಜ್ಜಿಯ ರವಿಕೆಯನ್ನೊಮ್ಮೆ, ತಾತನ ಅಂಗಿಯನ್ನೊಮ್ಮೆ ತೀಕ್ಷ್ಣವಾಗಿ ನೋಡಿದ. ನಂತರ ಹೇಳಿದ.

'ಪುಟ್ಟಮ್ಮಜ್ಜಿಯ ರವಿಕೆ ಇದ್ದಂಗೆ ಐತೆ'. ●